

ಶ್ರಮದಾನ ಮಾಡುವ ನಾರ್ವೆ ಯುವಕ

# ನಾರ್ವೆ ಮಂದಿಯ ಹೊಸ ಅವತಾರ!



ಮಲೆನಾಡಿನ ಮೂಲ ಸಂಸ್ಕೃತಿಯ ಹಳ್ಳಿಯ ಸೊಗಡನ್ನು ಇಂದಿಗೂ ಉಳಿಸಿಕೊಂಡಿರುವ ಊರುಗಳು ಅಪರೂಪ. ಇಳಿಜಾರಿನ ಹಸಿರು ಕಣಿವೆಯ ನಡುವೆ ಹರಿಯುವ ಹಳ್ಳ ಹೊಳೆ ಇಕ್ಕೆಲಗಳಲ್ಲಿ ಗದ್ದೆ ಬಯಲು ಅಡಿಕೆ, ತೆಂಗು, ತೋಟಗಳ ಸಾಲು. ಎತ್ತರದ ಧರೆಯಡಿಯಲ್ಲಿ ಬೆಚ್ಚಗೆ ಗೋಚರಿಸುವ ಹೆಂಚು ಹೊದ್ದ ಮನೆಗಳು. ಒಂದು ಮನೆಯಿಂದ ಇನ್ನೊಂದು ಮನೆಗೆ ಹೋಗಬೇಕಾದರೆ ಕಾಲು ಸಂಕದ ಇಳಿಜಾರಿನ ಹಾದಿಯಲ್ಲಿ ಹೆಜ್ಜೆ ಹೆಜ್ಜೆಗೂ ಅಡಿಕೆ ಮರವನ್ನೇ ಆಧಾರವಾಗಿ ಹಿಡಿದುಕೊಂಡು ಸಾಗಬೇಕು. ಆಯ ತಪ್ಪಿದರೆ ಅಪಾಯ.

ಇದು ಉತ್ತರ ಕನ್ನಡದ ಯಲ್ಲಾಪುರ ತಾಲೂಕಿನ ಬಾಗಿನಕಟ್ಟಾ ಗ್ರಾಮದಲ್ಲಿ ಕಣ್ಣಿಗೆ ಕಟ್ಟುವ ಪರಿಸರ. ಈ ಹಳ್ಳಿಗೆ ನಾರ್ವೆ ದೇಶದ ಕೆಲವು ನಾಗರಿಕರು ಬಂದು ಹೊಸ ಜಗತ್ತನ್ನೇ ಸೃಷ್ಟಿಸುವ ಪ್ರಯತ್ನ ಮಾಡಿದ್ದಾರೆ. ಕಳೆದ ಕೆಲವು ದಿನಗಳಿಂದ ಬಾಗಿನಕಟ್ಟಾದಲ್ಲಿ ಆಧ್ಯಾತ್ಮದ ದರ್ಶನದ ಅವತರಿಣಿಕೆಗಳು ತೆರೆದುಕೊಂಡಿದೆ. ವಿದೇಶಿಯರ ಆಗಮನದಿಂದ ಊರಿನಲ್ಲಿ ಕುತೂಹಲ ಗರಿಗೆದರಿದೆ. ಇಲ್ಲಿನ ಸಂಸ್ಕೃತ ಉಪನ್ಯಾಸಕ ವಿಘ್ನೇಶ್ವರ ಭಟ್ಟರ 'ಸಂಹಿತ ಸಂಸ್ಥೆ'ಯ ಮೂಲಕ ಪರಿಚಯಿಸಿಕೊಂಡ ನಾರ್ವೆ ದೇಶದ 22 ಪ್ರವಾಸಿಗರು ತಿಂಗಳುಗಳ ಕಾಲ ಪ್ರವಾಸಧ್ಯಯನದಲ್ಲಿ ತೊಡಗಿಕೊಂಡಿದ್ದಾರೆ. ಬಾಗಿನಕಟ್ಟಾದಲ್ಲಿಯೇ ಊಟ, ವಸತಿ, ಶ್ರಮದಾನ, ಸ್ಥಳ ಭೇಟಿ, ಸಂಶೋಧನೆ ಕಾರ್ಯದಲ್ಲಿ ತಮ್ಮನ್ನು ಊರಿನವರ ಜೊತೆ ತೊಡಗಿಸಿಕೊಂಡಿದ್ದಾರೆ.

ಪ್ರತಿನಿತ್ಯ ನಸುಕಿನ ನಾಲ್ಕು ಗಂಟೆಗೆ ಆರಂಭವಾಗುವ ಇವರ ದಿನಚರಿಯಲ್ಲಿ ಯೋಗ, ಪ್ರಾಣಾಯಾಮ, ಧ್ಯಾನ, ಸೂರ್ಯಾರಾಧನೆ ನಂತರ ವಿಘ್ನೇಶ್ವರ ಭಟ್ಟರ ನೇತೃತ್ವದಲ್ಲಿ ಗಣಹವನ ಸೇರಿದಂತೆ ವಿವಿಧ ಹೋಮ ಹವನಗಳು ಜರುಗುತ್ತವೆ. ಜಪ ಅನುಷ್ಠಾನ ಮುಗಿಸಿದ ನಂತರ ಈ ವಿದೇಶೀ ಮಂದಿ ಊರಿನ ದೇವಸ್ಥಾನದ ನೂತನ ಕಟ್ಟಡದ ನಿರ್ಮಾಣ ಕಾರ್ಯದಲ್ಲಿ ತೊಡಗಿಕೊಳ್ಳುತ್ತಾರೆ. ಊರಿನವರ ಜೊತೆ ಶ್ರಮದಾನದ ಮೂಲಕ ಹಳ್ಳದ ಆಚೆಯ ರಸ್ತೆಯಂಚಿನಿಂದ ಕಲ್ಲು, ಇಟ್ಟಿಗೆ, ಮರಳುಗಳನ್ನು ತಲೆಯ ಮೇಲೆ ಹೊತ್ತು ಗದ್ದೆ ಬದಿಯಲ್ಲಿ ಸಾಗಿ ಹಳ್ಳದ ಕಾಲು ಸಂಕ ದಾಟಿ ಕಟ್ಟಡದ ಸ್ಥಳಕ್ಕೆ ಸಾಗಿಸುತ್ತಾರೆ. ಊರಿನವರ ಮಾರ್ಗದರ್ಶನದಲ್ಲಿ ತಾವೇ ದುಡಿದು ಶ್ರಮದಾನದಲ್ಲಿ ಕಟ್ಟಿದ ದೇವಾಲಯದ ಕಟ್ಟಡವು ಶಾಶ್ವತವಾಗಿ ಊರಿನ ಜನರ ಶ್ರದ್ಧಾ ಕೇಂದ್ರವಾಗಿ ಇರಲಿ ಎನ್ನುವ ಆಶಯ ಈ ವಿದೇಶಿಗರದ್ದು.

ಮಧ್ಯಾಹ್ನದ ಊಟ, ವಿರಾಮ ಅಲ್ಲಿಯೇ ಮುಗಿಸಿ ಶ್ರಮದಾನದ ನಂತರ ಪಕ್ಕದಲ್ಲಿ ಹರಿಯುವ ಹಳ್ಳದಲ್ಲಿಯೇ ಸ್ನಾನ ಮುಗಿಸಿ ಸಂಜೆಯಾಗುತ್ತಿದ್ದಂತೆ ಸಂಧ್ಯಾವಂದನೆ, ಭಗವದ್ಗೀತೆ ಪಠಣ ಅಧ್ಯಯನದ ಮೂಲಕ ದಿನದ ಶ್ರಮ ಸಂಪನ್ನವಾಗುತ್ತದೆ. ರಾತ್ರಿ ಊರಿನವರು ಸಂಯೋಜಿಸಿರುವ ಸಂಗೀತ, ನಾಟಕ, ಯಕ್ಷಗಾನದಂತಹ ದೇಸಿ ಸಂಸ್ಕೃತಿಯ ಮನರಂಜನಾ ಕಾರ್ಯಕ್ರಮಗಳನ್ನು ವಿದೇಶಿಗರಿಗೆ ಪರಿಚಯಿಸುವ ಮೂಲಕ ಊರಿನವರು ಈ ನೆಲದ ಆತಿಥ್ಯವನ್ನು ನೀಡುತ್ತಾರೆ. ವಿಘ್ನೇಶ್ವರ ಭಟ್ಟರ ಜೊತೆಗೆ ಸ್ಥಳೀಯರಾದ ಸುಬ್ರಹ್ಮಣ್ಯ ಗಾಂವ್ಕರ, ಉದಯ ಭಾಗ್ವತ ಹಾಗೂ ನಲವತ್ತು ಮನೆಗಳ ಸದಸ್ಯರು ಎಲ್ಲ ಕೆಲಸಗಳಲ್ಲಿ ಭಾಗಿಗಳಾಗುವ ಮೂಲಕ ತಿಂಗಳುಗಳ ಕಾಲ ತಮ್ಮ ಸಮಯವನ್ನು ವಿದೇಶಿಗರ ಜೊತೆ ಕಳೆಯಲು ನಿರ್ಣಯಿಸಿಕೊಂಡಿದ್ದಾರೆ.

ಕಳೆದ ಹನ್ನೆರಡು ವರ್ಷಗಳ ಹಿಂದೆಯೇ ಭಾರತಕ್ಕೆ ಭೇಟಿ ನೀಡಿದ ಅದರಲ್ಲೂ ಉತ್ತರ ಕನ್ನಡದ ವಿವಿಧೆಡೆ ಸಂಚರಿಸಿ ತಮ್ಮ ಪ್ರವಾಸಿ ಅನುಭವವನ್ನು ತೆರೆದಿಡುವ ನಾರ್ವೆ ದೇಶದ ಪ್ರವಾಸಿಗರ ತಂಡದ ನಾಯಕ ಅಲೆಗ್ಸಾಂಡರ್ ಮೆದಿನ್ನ ಪ್ರಕಾರ 'ಬಾಗಿನಕಟ್ಟಾದಂತಹ ಜನಜೀವನದ ಸಂಸ್ಕೃತಿ ವಿಚಾರ ಪ್ರವಾಸಿ ಅಧ್ಯಯನ ಅಂತರಂಗದ ಶುದ್ಧಿಯ ಕಾರಣಕ್ಕಾಗಿ ಭೇಟಿ ನೀಡುತ್ತಿದ್ದು, ಇಲ್ಲಿಯ ಜನಜೀವನದ ಶ್ರಮ ಸಂಸ್ಕೃತಿಯ ಆದರಾತಿಥ್ಯಗಳು ಕಂಡು ಬೆರಗಾಗಿದ್ದೇವೆ. ಬದುಕಿನ ಸಾರ್ಥಕತೆಯನ್ನು ಕಾಣುವ ದೇಸಿ ನೆಲದ ಚೈತನ್ಯ ನಮ್ಮಲ್ಲಿ ಹೊಸದೊಂದು ಶಕ್ತಿ ಅವತರಿಸುವಂತಿದೆ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

■ **ದತ್ತಾತ್ರೇಯ ಭಟ್ಟ ಕಣ್ಣಿಪಾಲ**